ಇ) ಬೆಳಗಾಂ ಜಿಲ್ಲೆಯಲ್ಲಿಯ ಪ್ರತಿಯೊಂದು ಮಾರ್ಕೆಟ್‌ಯಾರ್ಡ್‌ನಲ್ಲಿ ಸೆಸ್ ಮುಖಾಂತರ ಎಷ್ಟು ಹಣವನ್ನು ಸಂದಾಯ ಮಾಡಲಾಗಿದೆ;

ಈ) ಬೆಳಗಾವಿ ಜಿಲ್ಲೆಯಲ್ಲಿರುವ ಪ್ರತಿಯೊಂದು ಮಾರ್ಕೆಟ್ ಯಾರ್ಡ್‌ನಲ್ಲಿ ರೈತರ ಕಡೆಯಿಂದ ಸೆಸ್ ಮುಖಾಂತರ ಸಂದಾಯ ಮಾಡಿದ ಹಣದಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿರುವುದು ಹಾಗೂ ಇನ್ನೂ ಎಷ್ಟು ಹಣ ಉಳಿದಿರುವುದು (ಸಂಪೂರ್ಣವಾದ ಮಾಹಿತಿಯನ್ನು ನೀಡುವುದಾಗಬೇಕು)

ಶ್ರೀ ಮದನಗೋಪಾಲ್ ನಾಯಕ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):

ಅ) ಇಲ್ಲ

ಆ) ಪ್ರಶ್ನೆ ಉದ್ಭವಿಸುವುದಿಲ್ಲ

ಇ)

1. ರಾಮದುರ್ಗ	-	ರೂ.	5,13,598-28
2. ಬೆಳಗಾವಿ	-	ರೂ.	27,29,903-33
3. ನಿಪ್ಪಾಣಿ	-	ರೂ.	1,40,193-04
4. ಸಂಕೇಶ್ವರ	-	ರೂ.	4,15,515-96
5. ನಂದಗಡ	-	ರೂ.	1,52,046-96
6. ಕುಡಚಿ	-	ರೂ.	1,29,154-95
7. ಬೈಲಹೊಂಗಲ	-	ರೂ.	12,35,094-22
8. ಸವದತ್ತಿ	-	ರೂ.	7,31,897-29
9. ಗೋಕಾಕ್	-	ರೂ.	19,63,227-24
10. ಅಥಣಿ	-	ರೂ.	4,56,529-79

ಈ) ವಿವರಗಳು ಸದ್ಯಕ್ಕೆ ಲಭ್ಯವಿರುವುದಿಲ್ಲ. ವಿವರಗಳನ್ನು ಪಡೆದು ನಂತರ ಮಾನ್ಯ ಸದಸ್ಯರಿಗೆ ಒದಗಿಸಲಾಗುವುದು.

ಕರ್ನಾಟಕ ರಾಜ್ಯ ಬೀಜ ನಿಗಮದ ಪ್ರಗತಿ

555 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಬೀಜ ನಿಗಮವನ್ನು ಯಾವಾಗ ಪ್ರಾರಂಭಿಸಲಾಯಿತು;

ಆ) ಅದರಲ್ಲಿ ತೊಡಗಿಸಲಾಗಿರುವ ಬಂಡವಾಳವೆಷ್ಟು?

ಇ) ಅದರ ಕಾರ್ಯ ಚಟುವಟಿಕೆಗಳೇನು?

ಈ) ಇದುವರೆಗೆ ನಿಗಮವು ಯಾವ ಯಾವ ವರ್ಷಗಳಲ್ಲಿ ನಷ್ಟವನ್ನು ಅನುಭವಿಸಿಕೊಂಡು ಬರುತ್ತಿದೆ.

ಉ) ಅದಕ್ಕೆ ಕಾರಣಗಳೇನು? ಹಾಗೂ ಅದನ್ನು ತಪ್ಪಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):

ಅ) ಕರ್ನಾಟಕ ರಾಜ್ಯ ಬೀಜ ನಿಗಮವು 1973ರಲ್ಲಿ ಕರ್ನಾಟಕ ರಾಜ್ಯ ಆಗ್ರೋ ಬೀಜ ನಿಗಮ ನಿಯಮಿತ ಎಂಬ ಹೆಸರಿನಲ್ಲಿ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ನ ಅಧೀನದಲ್ಲಿ ಆರಂಭಗೊಂಡಿತು. ತರುವಾಯ, ರಾಷ್ಟ್ರೀಯ ಬೀಜ ಯೋಜನೆಯಡಿಯಲ್ಲಿ 1978ರಿಂದ ಕರ್ನಾಟಕ ರಾಜ್ಯ ಬೀಜ ನಿಗಮವಾಗಿ ಸ್ವತಂತ್ರವಾಗಿ ತನ್ನ ಕಾರ್ಯವನ್ನು ನಿರ್ವಹಿಸುತ್ತಿದೆ.

ಆ) ಕರ್ನಾಟಕ ರಾಜ್ಯ ನಿಗಮವು ರೂ. 500 ಲಕ್ಷದ ಬಂಡವಾಳವನ್ನು ಹೂಡಲು ಪ್ರಸ್ತಾವನೆಗೆ ಪಡೆದಿದೆ. ಅದರಲ್ಲಿ ರೂ. 300 ಲಕ್ಷದಷ್ಟು ಬಂಡವಾಳವನ್ನು ಹೂಡಲು ಕತೆ ನೀಡಲಾಗಿದೆ. ಅದರಲ್ಲಿ ಈ ತನಕ ರೂ. 194.03 ಲಕ್ಷಗಳಷ್ಟು ಬಂಡವಾಳ ಹೂಡಲಾಗಿದೆ. ನಿಗಮದ ಒಟ್ಟು ಬಂಡವಾಳದಲ್ಲಿ ಕರ್ನಾಟಕ ರಾಜ್ಯ ಸರ್ಕಾರ, ಭಾರತ ಸರ್ಕಾರ (ರಾಷ್ಟ್ರೀಯ ಬೀಜ ನಿಗಮದ ಮೂಲಕ) ಹಾಗೂ ಬೀಜ ಬೆಳೆಗಾರರು ಶೇ. 35:30:35 ರಂತೆ ಕ್ರಮವಾಗಿ ಬಂಡವಾಳವನ್ನು ಹೂಡಬಹುದಾಗಿದೆ.

ಇ) ಕರ್ನಾಟಕ ರಾಜ್ಯದ ಬೀಜದ ಉದ್ಯಮದಲ್ಲಿ ಮುಂದಾಳಾಗಿ ಸತತವಾಗಿ ಒಳ್ಳೆಯ ಗುಣಮಟ್ಟದ ಸಾಕಷ್ಟು ಬೀಜಗಳನ್ನು ಒಳ್ಳೆಯ ಗುಣಮಟ್ಟದ ಸಾಕಷ್ಟು ಬೀಜಗಳನ್ನು ಬೇಳೆಗೆ ಸರಿಯಾಗಿ, ಬೇಕಾದ ಸ್ಥಳದಲ್ಲಿ ಯೋಗ್ಯ ದರದಲ್ಲಿ ಬೀಜಗಳನ್ನು ಒದಗಿಸಲು ಉದ್ದೇಶವನ್ನು ನಿಗಮವು ಹೊಂದಿದೆ.

ಈ) ಕರ್ನಾಟಕ ಬೀಜ ನಿಗಮವು ರಾಷ್ಟ್ರೀಯ ಬೀಜ ಯೋಜನೆಯಡಿ ಪ್ರತ್ಯೇಕ ಸಂಸ್ಥೆಯಾಗಿದ್ದಿನದಿನದಿಂದ, ಮೊದಲನೆ ವರ್ಷ ಬಿಟ್ಟು ಇಂದಿನವರೆಗೂ ಹೆಚ್ಚಿನ ಲಾಭವನ್ನು ಗಳಿಸಿ, ತನ್ನ ಕಾರ್ಯ ಚಟುವಟಿಕೆಗಳನ್ನು ಬಲಪಡಿಸುತ್ತಾ ಕೆಲಸ ಮಾಡುತ್ತಿದೆ.

ಉ) ಉದ್ಭವಿಸುವುದಿಲ್ಲ.

ಉತ್ತರ ಕರ್ನಾಟಕದಲ್ಲಿ ತೋಟಗಾರಿಕೆ ಅಭಿವೃದ್ಧಿ

627 - ಶ್ರೀ ಶಿವಾನಂದ ಪೆಟ್. ಕೌಜಲಗಿ (ಬೈಲಹೊಂಗಲ): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಉತ್ತರ ಕರ್ನಾಟಕದಲ್ಲಿ ತೋಟಗಾರಿಗೆ ಇಲಾಖೆಯವರು ಅಭಿವೃದ್ಧಿ ಪಡಿಸಲು ಯಾವುದೇ ಹೆಚ್ಚಿನ ಕ್ರಮವನ್ನು ಕೈಗೊಳ್ಳುತ್ತಿಲ್ಲವೆಂಬ ಸಂಗತಿ ಸರಕಾರದ ಗಮನಕ್ಕೆ ಬಂದಿದೆಯೇ.*

ಆ) *ಹಾಗಿದ್ದಲ್ಲಿ, ಉತ್ತರ ಕರ್ನಾಟಕದಲ್ಲಿಯೂ ಸಹ ತೋಟಗಾರಿಕೆಯನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಬೇಕಾದ ಎಲ್ಲಾ ಸವಲತ್ತುಗಳನ್ನು ಹೊಂದಿದ್ದರೂ ಕೂಡ ಅಲ್ಲಿ ಅಭಿವೃದ್ಧಿ ಪಡಿಸಲು ಹಿಂಜರಿಯುತ್ತಿರಲು ಕಾರಣವೇನು.*

ಇ) *ಹಾಗಿದ್ದಲ್ಲಿ ಇನ್ನು ಮುಂದೆಯಾದರೂ ಉತ್ತರ ಕರ್ನಾಟಕದಲ್ಲಿ ತೋಟಗಾರಿಕೆಯನ್ನು ಅಭಿವೃದ್ಧಿ ಪಡಿಸಲು ಕ್ರಮಕೈಗೊಳ್ಳಲಾಗುವುದೇ*

ಈ) *ಶ್ರೀ ಕ್ಷೇತ್ರ ಸೊಗಲದಲ್ಲಿ ತೋಟಗಾರಿಕೆಯನ್ನು ಅಭಿವೃದ್ಧಿ ಪಡಿಸಲು ಸಾಕಷ್ಟು ಸ್ಥಳಾವಕಾಶವಿದ್ದರೂ ಕೂಡ ಅಲ್ಲಿ ಅಭಿವೃದ್ಧಿ ಮಾಡದೆ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ*

ಉ) *ಇನ್ನು ಮುಂದೆಯಾದರೂ ಶ್ರೀ ಕ್ಷೇತ್ರ ಸೊಗಲದಲ್ಲಿ ತೋಟಗಾರಿಕೆಯನ್ನು ಅಭಿವೃದ್ಧಿಪಡಿಸಲಾಗುವುದೇ?*

ಊ) *ವೆಸ್ಟರನ್ ಘಟ್ಟದಲ್ಲಿ ಶ್ರೀ ಕ್ಷೇತ್ರ ಸೊಗಲದಲ್ಲಿ ತೋಟಗಾರಿಕೆ ಇಲಾಖೆಯಿಂದ ಅಭಿವೃದ್ಧಿ ಪಡಿಸಲಾಗುವುದೆಂದು ವಿಧಾನಸಬೆಯಲ್ಲಿ ಆಶ್ವಾಸನೆ ನೀಡಿದ್ದರೂ ಕೂಡ ಇದುವರೆಗೂ ಅಭಿವೃದ್ಧಿ ಪಡಿಸದೇ ಇರಲು ಕಾರಣಗಳೇನು?*

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಮಂತ್ರಿಯವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.